


ಅದೇನು ವಿಶೇಷ ಬಿಡು ಮಾರಾಯ್ತಿ; ಪ್ರಾಪ್ತ ವಯಸ್ಸಿಗೆ ಮದುವೆ ಆಗಿದ್ರೂ ನನಗೆ ಶಿಕ್ಷೆ ತಪ್ಪಿದೆಯಾ ನೋಡು?

ಆಹಾರ ಹಣದುಬ್ಬರ ಇಳಿಕೆ...




ಇತ್ತೀಚೆಗೆ ಉಪವಾಸ ಸತ್ಯಾಗ್ರಹ ಮಾಡುವವರ ಸಂಖ್ಯೆ ಹೆಚ್ಚಿರೋದ್ರಿಂದ, ಆಹಾರದ ಬೇಡಿಕೆ ಕಡಿಮೆ ಆಗಿ ಹಣದುಬ್ಬರ ಕಡಿಮೆ ಆಗಿರಬೇಕು..!






ಸರ್ಕಾರದಲ್ಲಿ ಗಣಿಗಾರಿಕೆದಾರರ ಪ್ರಭಾವ ಎಷ್ಟಿದೆ ಅಂತ ಈಗ್ಲಾದ್ರೂ ಗೊತ್ತಾಯ್ತಾ?



ಏನು ಕಡುಬು ಬೇಕಾ...? ಅವಳು ಇನ್ನೂ ಮೂರು ನಾಕು ಧಾರಾವಾಹಿ ಮುಗಿಯುವವರೆಗೂ ಮೇಲೆ ಏಳುವುದಿಲ್ಲ ದೇವಾ..!



ನಿಮ್ಮ ಹೊಸ ರುಚಿಯನ್ನು ತಿನ್ನಲು ನನ್ನಿಂದ ಸಾಧ್ಯವಿಲ್ಲ ತಾಯಿ, ಅದಕ್ಕೆ ನಾಯಿಯನ್ನು ಖರೀದಿಸಿದ್ದೇನೆ..!

## ನಕ್ಕು ಬಿಡಿ



**ಪ್ರೀತಿ**

ಪ್ರೀತಿಯನ್ನು ಕೊಂಡುಕೊಳ್ಳಲಾಗುವುದಿಲ್ಲ. ಆದರೆ ಅದಕ್ಕಾಗಿ ಯಾವಾಗಲೂ ದುಬಾರಿ ಬೆಲೆ ತೆರುತ್ತಲೇ ಇರಬೇಕಾಗುತ್ತದೆ.

**ಮದುವೆ!**

ಪತಿ ಬದಲಾಗ ಬಹುದೆಂದು ಆಶಿಸಿ ಹೆಣ್ಣು ಮದುವೆಯಾಗುತ್ತಾಳೆ.

ಹೆಂಡತಿ ಹಾಗೆಯೇ ಇರುತ್ತಾಳೆ ಎಂದು ಭಾವಿಸಿ ಗಂಡು ಮದುವೆಯಾಗುತ್ತಾನೆ.

ನಂತರ ಇಬ್ಬರೂ ನಿರಾಶೆಯಿಂದ ಜೀವನ ಸಾಗಿಸುತ್ತಾರೆ.

**ಜೋಡಿ**

ಪತಿ (ನವ ವಿವಾಹಿತ ಪತ್ನಿಯೊಂದಿಗೆ) 'ಮದುವೆಗೆ ಮುಂಚೆ ನಾನು ತುಂಬಾ ಕಿಲಾಡಿಯಾಗಿದ್ದೆ. ಕಂಡ ಕಂಡ ಹುಡುಗಿಯರಿಗೆ ಚುಡಾಯಿಸುತ್ತ ತಿರುಗುತ್ತಿದ್ದೆ. ನೀನು ಹೇಗಿದ್ದೆ?'

'ಗುಣ ಹೊಂದಿಸಿಯೇ ಮದುವೆ ಮಾಡುತ್ತಾರಲ್ಲವೇ?' ಎಂದಳು ಹೆಂಡತಿ ಶಾಂತಳಾಗಿ!



**ಆದರ್ಶ**

'ಆದರ್ಶ ಪತಿ ಯಾರು?

ಪುರಾತತ್ವ ಶಾಸ್ತ್ರ ಪಂಡಿತ'

'ಯಾಕೆ?'

'ವಸ್ತು ಹಳೆಯದಾದಷ್ಟೂ ಅವನಿಗೆ ಆಸಕ್ತಿ ಹೆಚ್ಚು!'

-ಆರ್.ವಿ. ಭಟ್ಟ, ಬೆಳಗಾಂ